C.C No.:1659/2021
CW: 03 PW: 02

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸೊರಬ**

**ಹೆಸರು** :- **ಶ್ರೀ ಕೃಷ್ಣಪ್ಪ.**

**ತಂದೆಯ ಹೆಸರು** :- **ಶ್ರೀ ದೊಡ್ಡ ದುರ್ಗಪ್ಪ.**

**ವಯಸ್ಸು** :- **46 ವರ್ಷ**

**ಉದ್ಯೋಗ** :- **ಗಾರೆ ಕೆಲಸ.**

**ಸ್ಥಳ** :- **ತಲ್ಲೂರು ಗ್ರಾಮ.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು. ದಿನಾಂಕ:** 20.11.2023.

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ**

1. ನನಗೆ ಚಾಸಾ 2 ರವರು ಪರಿಚಯ. ಸಾಕ್ಷಿಯು ನಿಪಿ 1 ಸ್ಥಳ ಪಂಚನಾಮೆ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಮ್ಮ ಊರಿನಲ್ಲಿನ ರಸ್ತೆಯ ಮೇಲೆ ಸುಮಾರು 3 ರಿಂದ 4 ವರ್ಷಗಳ ಹಿಂದೆ ಮಾಡಿರುತ್ತೇನೆ. ಸದರಿ ಸಹಿಯನ್ನು ಪೋಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ಕಾರಣಕ್ಕಾಗಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀಸವಾಲು : ಮಾನ್ಯ ಸ ಸ ಅ ರವರಿಂದ:**

2. ದಿನಾಂಕ 02.12.2020 ರಂದು ಆನವಟ್ಟಿ ತಿಮ್ಮಾಪುರ ಕ್ರಾಸ್ ಹತ್ತಿರ ಬಿ.ಎಸ್.ಎನ್.ಎಲ್ ಆಫೀಸ್ ಎದುರಿನ ರಸ್ತೆಯಲ್ಲಿ ಮೂರು ಜನ ಅಸಾಮಿಗಳು ಅಕ್ರಮವಾಗಿ ಮದ್ಯದ ವಿಸ್ಕಿ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಆನವಟ್ಟಿ ಪೋಲೀಸರು ನನಗೆ ಮತ್ತು ಚಾಸಾ 2 ರವರಿಗೆ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ್ದರು ಎಂದರೆ ಸರಿಯಲ್ಲ. ಪೋಲೀಸರು ನನ್ನ ಮತ್ತು ಚಾಸಾ 2 ರವರ

ಸಮಕ್ಷಮ ದಾಳಿ ಮಾಡಿ 9.00 ರಿಂದ 10.00 ರವರೆಗೆ ನಿಪಿ 1 ರಂತೆ ಪಂಚನಾಮೆ ಮಾಡಿ ಅಬಕಾರಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ 1 ರ ಸಮಯದಲ್ಲಿ ಹಾಜರಿದ್ದು ನಿಪಿ 1 ರಲ್ಲಿರುವ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರ ಮುಂದೆ ನಾನು ದಿನಾಂಕ 03.12.2020 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ನಾನು ನಿಪಿ 3 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಜಿ ಎಂ ಪಿ ವಕೀಲರಿಂದ: ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ: ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**C/c ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ: ಸೊರಬ.**